ಇ) ಸ್ವಲ್ಪ ಮಟ್ಟಿಗೆ ಅನಾನುಕೂಲವಾಗುತ್ತಿರುವುದು ನಿಜ.

ಈ) ಹಾಳಾಗಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ತ್ವರಿತಗತಿಯಲ್ಲಿ ಬದಲಿಸಲು ಕ್ರಮ ಕೈಗೊಂಡಿದೆ.

ಡಾಬಸ್ ಪೇಟೆಯಲ್ಲಿ ಒಂದು 66 : 11 ಕೆ.ವಿ. 106.3 ಎಂವಿಎ ವಿದ್ಯುತ್ ಸಬ್‌ಸ್ಟೇಷನ್ ಅನ್ನು ಶೀಘ್ರಗತಿಯಲ್ಲಿ ಸ್ಥಾಪಿಸಲಾಗುವುದು.

ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಸರಬರಾಜಾಗುತ್ತಿರುವ ವಿದ್ಯುತ್‌ನ ವೋಲ್ಟೇಜ್ ಮಟ್ಟವನ್ನು ಉತ್ತಮಪಡಿಸುವಂತೆ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಂಸ್ಥೆಯನ್ನು ತೀವ್ರವಾಗಿ ಒತ್ತಾಯಿಸಲಾಗುತ್ತಿದೆ.

ನೆಲಮಂಗಲದಲ್ಲಿ ವಿಶ್ವಬ್ಯಾಂಕ್ ನೆರವಿನೊಡನೆ 400 : 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ.

ವಿಷಯ : ಕೆ. ಇ. ಬಿ. ಗೆ ಬರಬೇಕಾದ ಬಾಕಿ ವಸೂಲಿ.

Q : 670

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿರುವ ಬಾಕಿ ಹಣ ಎಷ್ಟು? (ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿರುವ ಬಾಕಿದಾರರ ಪಟ್ಟಿ ಒದಗಿಸುವುದು)

ಆ) ಈ ಬಾಕಿ ವಸೂಲಿ ಮಾಡದೇ ಇರಲು ಕಾರಣವೇನು? ಮತ್ತು ಯಾವಾಗ ಈ ಮೊತ್ತವನ್ನು ವಸೂಲಿ ಮಾಡಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಸೆಪ್ಟೆಂಬರ್ 92ರ ಅಂತ್ಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೈಗಾರಿಕೋದ್ಯಮಿಗಳಿಂದ ಬರಬೇಕಾಗಿದ್ದ ಬಾಕಿ ಹಣದ ಮೊತ್ತ 266.24 ಕೋಟಿ ರೂಪಾಯಿಗಳು.

ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿರುವ ಬಾಕಿದಾರರ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಬಾಕಿ ವಸೂಲಿ ಮಾಡದೇ ಇರಲು ಮುಖ್ಯ ಕಾರಣಗಳು :

1. ಕೆಲವು ಕೈಗಾರಿಕೆಗಳು ಬಾಕಿ ಹಣದ ಬಗ್ಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿ ಮಂಡಳಿಯ ವಿರುದ್ಧ ದಾವೆ ಹೂಡಿರುತ್ತಾರೆ. ನ್ಯಾಯಾಲಯಗಳಲ್ಲಿ ಪ್ರಕರಣಗಳು ಇತ್ಯರ್ಥವಾಗದ ಹೊರತು ವಸೂಲಾತಿಯ ಬಗ್ಗೆ ಯಾವ ತೀವ್ರ ಕ್ರಮವನ್ನು

ತೆಗೆದುಕೊಳ್ಳಲು ಸಾಧ್ಯವಿಲ್ಲ.

2. ಕೆಲವು ಕೈಗಾರಿಕೆಗಳು ಬಾಕಿ ಹಣದ ಬಗ್ಗೆ ಮೇಲ್ಮನವಿಗಳನ್ನು ಸಲ್ಲಿಸಿದ್ದಾರೆ. ಮೇಲ್ಮನವಿಗಳನ್ನು ವಿಚಾರಣೆ ಮಾಡಿ, ತೀರ್ಮಾನ ತೆಗೆದುಕೊಂಡ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ಮಂಡಳಿಯು ಕೆ. ಇ. ಬಿ. (ರಿಕವರಿ ಆಫ್ ಡ್ಯೂಸ್) ಆಕ್ಟ್ 1978 ಮತ್ತು ಕೆ. ಇ. ಬಿ. (ರಿಕವರಿ ಆಫ್ ಡ್ಯೂಸ್) ರೂಲ್ಸ್ 1978 ಹಾಗೂ ಕೆ. ಇ. ಬಿ. ಸಪ್ಲೈ ರೆಗ್ಯೂಲೇಷನ್ಸ್ ಪ್ರಕಾರ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೆಲವು ಕೈಗಾರಿಕೆಗಳು ಕಂತಿನಲ್ಲಿ ಬಾಕಿ ಹಣವನ್ನು ಪಾವತಿ ಮಾಡಲು ಮಾಡಿದ್ದ ಮನವಿಯನ್ನು ಪರಿಗಣಿಸಿ ಕಂತುಗಳಲ್ಲಿ ಬಾಕಿಯನ್ನು ತೀರಿಸಲು ಅವಕಾಶ ನೀಡಲಾಗಿದೆ.

ವಿಷಯ : ಮೈಸೂರು - ಬೆಂಗಳೂರು ರಸ್ತೆಯ ಆಧುನೀಕರಣ.

Q : 44

ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು- ಬೆಂಗಳೂರು ರಸ್ತೆಯನ್ನು ಪ್ರಸಕ್ತ ಸಂಚಾರದ ಒತ್ತಡಕ್ಕೆ ಅನುಗುಣವಾಗಿ ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಮೈಸೂರು ಮತ್ತು ಬೆಂಗಳೂರು ರಸ್ತೆಯ ನವೀಕರಿಸುವ ಬಗ್ಗೆ ಸರ್ಕಾರದವರು ಎಷ್ಟು ಸಾರಿ ಹೇಳಿಕೆ ನೀಡಿರುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು - ಮೈಸೂರು ರಸ್ತೆಯಲ್ಲಿನ ಸಂಚಾರ ದಟ್ಟಣೆಯನ್ನು ಗಮನಿಸಿ ಅತಿ ಅವಶ್ಯವಿರುವ ಭಾಗಗಳಲ್ಲಿ (ಕಿ .ಮಿ. 33ರಿಂದ 46, 74.55 ರಿಂದ 75.80, 89.40 ರಿಂದ 111. 20, 118.50 ರಿಂದ 124.80) ರಸ್ತೆ ಅಗಲಪಡಿಸುವುದೂ, ತಿರುವುಗಳನ್ನು ನೇರಪಡಿಸುವುದು, ಅತಿ ಹೆಚ್ಚು ಸಂಚಾರ ಸಾಂದ್ರತೆ ಇರುವ ಕಡೆ ಜೋಡಿ ರಸ್ತೆ ಮಾಡುವುದು, ಇವುಗಳನ್ನು ಮಾಡಲಾಗುತ್ತಿದೆ. ಅಲ್ಲದೆ, 20 ಲಕ್ಷ ರೂ.ಗಳ ವೆಚ್ಚದಲ್ಲಿ ಸೂಚನಾ ಫಲಕಗಳು, ರಸ್ತೆ ವಿಭಜಕ ಪ್ರತಿಫಲನ ಸಲಕರಣೆಗಳನ್ನು ಅಳವಡಿಸಲು, ಅಂದಾಜನ್ನು ಮಂಜೂರು ಮಾಡಲಾಗಿದೆ. ಬೆಂಗಳೂರು- ಮೈಸೂರು ಮಧ್ಯೆ ಒಂದು ಪ್ರತ್ಯೇಕ ವೇಗದ ಹೆದ್ದಾರಿಯನ್ನು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು- ಮೈಸೂರು ಮಾರ್ಗವಾಗಿ ಕೇರಳ ರಾಜ್ಯದ ತಲ್ಲಿಚೇರಿಯನ್ನು ಸೇರುವ